**ಮೇ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ**

C.C.No.1693/2016.
CW4/PW4

| | |
|---|---|
| ಹೆಸರು | ಸಾಂಯವ್ವ ಬೂದಿ |
| ತಂದೆ ಹೆಸರು | ಸಿದ್ದಪ್ಪ |
| ವಯಸ್ಸು | 28 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಮುಗಳಖೋಡ, ತಾ: ಮುಧೋಳ |

**ದಿನಾಂಕ: 15-10-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ :- ಎ.ಪಿ.ಪಿ ರವರಿಂದ.**

ಚಾಸಾ-1 ನನ್ನ ಸಹೋದರಿ ಮತ್ತು ಚಾಸಾ-5 ನನ್ನ ತಾಯಿ. ನನಗೆ ಚಾಸಾ-6 ರಿಂದ 12 ಮತ್ತು ಆರೋಪಿತಳ ಪರಿಚಯ ಇರುತ್ತದೆ. ಆರೋಪಿತಳು ನಮ್ಮ ಸಂಬಂಧಿಕಳು ಆಗಬೇಕು.

ಮುಗಳಖೋಡ ಗ್ರಾಮದಲ್ಲಿ ನಮಗೆ ಸೇರಿದ ಜಮೀನ ರಿ.ಸ.ನಂ.273 ಇರುತ್ತದೆ. ಸದರಿ ನಮ್ಮ ಜಮೀನದ ಬಾಜು ಆರೋಪಿತಳ ಜಮೀನು ಇರುತ್ತದೆ. ಈಗ ಸುಮಾರು 08 ವರ್ಷಗಳ ಹಿಂದೆ ನಮ್ಮ ಜಮೀನದಲ್ಲಿ ನಾನು, ಚಾಸಾ-1 ಮತ್ತು 5 ಕೂಡಿಕೊಂಡು ಗೊಂಜಾಳ ಕಾಳನ್ನು ಬಿತ್ತಿ, ಕೇನಾಲ ಕಾಲುವೆ ನೀರನ್ನು ನಮ್ಮ ಜಮೀನಕ್ಕೆ ಬಿಡಲು ಹೋದಾಗ ಆರೋಪಿತಳು ಬಂದು ಚಾಸಾ-1 ರವರಿಗೆ ಕಲ್ಲು ತೆಗೆದುಕೊಂಡು ಹೊಡೆದಳು. ಆಗ ಸದರಿ ಜಗಳವನ್ನು ನಾನು ಬಿಡಿಸಿಕೊಳ್ಳಲು ಹೋದಾಗ ಆರೋಪಿತಳು ಕಲ್ಲು ತೆಗೆದುಕೊಂಡು ನನ್ನ ತಲೆಯ ಎಡಬಾಜು ಹೊಡೆದು ಗಾಯ ಮಾಡಿದಳು. ಆರೋಪಿತಳು ನನಗೆ ತಾಯಿಗೂ ಸಹ ಹೊಡಿ ಬಡಿ ಮಾಡಿರುತ್ತಾಳೆ. ನಂತರ ಆರೋಪಿತಳು ತನ್ನ ಮಗನನ್ನು ಕರೆಯಿಸಿ ನಮಗೆ ಹೊಡಿ ಬಡಿ ಮಾಡಿಸಿರುತ್ತಾಳೆ. ನಂತರ ಹಿರಿಯರಾದ ಚಾಸಾ-6 ಮತ್ತು 7 ರವರು ಬಂದು ಸದರಿ ಜಗಳವನ್ನು ಬಡಿಸಿಕೊಂಡರು. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವಮು.ಮಾ-1 ಕಲ್ಲನ್ನು ನೋಡಿ ಆರೋಪಿತಳು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾಳೆ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತಳೆ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ಆಗಿರುತ್ತಾಳೆ.

**ಪಾಟೀ ಸವಾಲು :- ಆರೋಪಿತಳ ಪರ ಶ್ರೀ ಪಿ.ಎಮ್.ವಿ ವಕೀಲರಿಂದ.**

ಆರೋಪಿತಳು ನನ್ನ ಸೊದರ ಮಾವನ ಹೆಂಡತಿ ಎಂದರೆ ಸರಿ. ಆರೋಪಿತಳ ಮತ್ತು ನಮ್ಮ ಜಮೀನುಗಳು ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸರಿ. ಸದರಿ ನಮ್ಮ ಜಮೀನುಗಳ ಮಧ್ಯ ಒಂದು ಒಡ್ಡು ಇರುತ್ತದೆ ಎಂದರೆ ಸರಿ. ಸದರಿ ಒಡ್ಡಿನ ಸಲುವಾಗಿ ನಮ್ಮ ಮತ್ತು ಆರೋಪಿತಳ ಮಧ್ಯ ಈಗ ಸುಮಾರು 25 ವರ್ಷಗಳಿಂದ ಜಗಳ ಇರುತ್ತದೆ ಎಂದರೆ ಸರಿ. ಸದರಿ ಒಡ್ಡನ್ನು ಅಳತೆ ಮಾಡಲು ಆರೋಪಿತಳು ಅರ್ಜಿಯನ್ನು

ಕೊಟ್ಟಿದ್ದಳು ಎಂದರೆ ಸರಿ. ನಾವು ಆರೋಪಿತಳ ಜಮೀನದಲ್ಲಿ ಅತೀ ಕ್ರಮಣ ಮಾಡಿರುತ್ತೇವೆ ಎಂದು ಅವಳು ಅಳತೆ ಮಾಡಲು ಅರ್ಜಿಯನ್ನು ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ಕೇನಾಲದ ಕಾಲುವೆ ನಮ್ಮ ಜಮೀನದಲ್ಲಿ ಹಾಯ್ದು ಹೋಗಿರುವುದಿಲ್ಲ ಮತ್ತು ಆರೋಪಿತಳ ಜಮೀನಕ್ಕೆ ಹತ್ತಿಕೊಂಡು ಸದರಿ ಕೇನಾಲ ಇರುತ್ತದೆ ಎಂದರೆ ಸರಿ. ನಾನು ನನ್ನ ಹೇಳಿಕೆಯಲ್ಲಿ ಆರೋಪಿತಳು ಮತ್ತು ಅವಳ ಮಗ ನಮಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ಬರೆಯಿಸಿರುವುದಿಲ್ಲ, ಆದರೆ ಆರೋಪಿತಳು ಹಲ್ಲೆ ಮಾಡಿರುತ್ತಾಳೆ ಎಂದು ಬರೆಸಿರುತ್ತೇನೆ. ಆರೋಪಿತಳು ನನ್ನ ತಲೆಯ ಎಡಬಾಜು ಕಲ್ಲಿನಿಂದ ಹೊಡೆದಿದ್ದರಿಂದ ನನ್ನ ತಲೆಯಿಂದ ರಕ್ತ ಬಂದು ನಾನು ಧರಿಸಿದ ಬಟ್ಟೆಗಳ ಮೇಲೆ ಬಿದ್ದಿತ್ತು ಎಂದರೆ ಸರಿ. ನನಗೆ ಗಾಯವಾಗಿದ್ದರಿಂದ ನಾನು ಚಿಕಿತ್ಸೆಗಾಗಿ ಮುಧೋಳದ ಮುನ್ನೊಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನಾನು ಒಂದು ದಿನ ದಾಖಲಾಗಿದ್ದೆ. ಸದರಿ ಆಸ್ಪತ್ರೆಯಲ್ಲಿ ನಾನು ಒಬ್ಬಳೆ ದಾಖಲಾಗಿದ್ದೆ. ಚಾಸಾ-1 ರವರು ಮಹಾಲಿಂಗಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ನಾವು ಆರೋಪಿತಳ ಜಮೀನದಲ್ಲಿ ಅತೀ ಕ್ರಮಣ ಮಾಡಿದ್ದರಿಂದ ಅವಳು ತನ್ನ ಜಮೀನನ್ನು ಅಳತೆ ಮಾಡಲು ಅರ್ಜಿ ಕೊಟ್ಟಿದ್ದರಿಂದ ನಾವು ಅವಳ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

ಈಗ ಸುಮಾರು 08 ವರ್ಷಗಳ ಹಿಂದೆ ನಾನು, ಚಾಸಾ-1/ ಮತ್ತು 5 ಕೂಡಿಕೊಂಡು ನಮ್ಮ ಜಮೀನದಲ್ಲಿ ಗೊಂಜಾಳ ಬೀಜವನ್ನು ಬಿತ್ತಿ ಕಾಲುವೆಯಿಂದ ನಮ್ಮ ಜಮೀನಕ್ಕೆ ನೀರನ್ನು ಬಿಡಲು ಹೋದಾಗ ಆರೋಪಿತಳು ಮು.ಮಾ-1 ಕಲ್ಲಿನಿಂದ ಚಾಸಾ-1 ಮತ್ತು 5 ರವರಿಗ ಹೊಡೆದು ಗಾಯ ಮಾಡಿದಳು ಎಂದು ಮತ್ತು ಸದರಿ ಕಲ್ಲಿನಿಂದ ನನ್ನ ತಲೆಯ ಎಡಬಾಜು ಹೊಡೆದು ಗಾಯ ಮಾಡಿದಳು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಅನೂಕೂಲವಾಗಲಿ ಎಂದು ಇವತ್ತಿನ ದಿನ ನ್ಯಾಯಾಲಯಕ್ಕೆ ಸಾಕ್ಷ ನುಡಿಯಲು ಬಂದಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.01.03 10:53:56 +0530